ಶ್ರೀ ಡಿ. ವಿ. ಸದಾನಂದಗೌಡ : ಪ್ರತಿ ಶಾಲೆಗಳಲ್ಲಿ ಅಕ್ಕಿಯನ್ನು ತಿಂಗಳಿಗೊಮ್ಮೆ ವಿತರಣೆ ಮಾಡುವ ಬಗ್ಗೆ ಏನಾದರೂ ಪ್ರಯತ್ನಗಳನ್ನು ಮಾಡಲಿಕ್ಕೆ ಸಾಧ್ಯ ಇದೆಯಾ ?

ಶ್ರೀ ಹೆಚ್. ಜಿ. ಗೋವಿಂದೇಗೌಡ : ಅಕ್ಕಿ ಹಂಚುವ ಕಾರ್ಯಕ್ರಮ ನೇರವಾಗಿ ನಮ್ಮ ಇಲಾಖೆಗೆ ಸಂಬಂಧಪಟ್ಟಿಲ್ಲ. ಡೆಪ್ಯುಟಿ ಕಮೀಷನರ್ ಇಲ್ಲಿಂದ ಕೆ.ಎಫ್.ಸಿ. ಯಿಂದ ತರಿಸಿ ಅಲ್ಲಿಂದ ಫೇರ್ ಪ್ರೈಸ್ ಷಾಪ್‌ಗೆ ಕಳುಹಿಸುವ ಜವಾಬ್ದಾರಿ ಎಲ್ಲಾ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಿರುವುದು. ಅಲ್ಲಿಂದ ಬಿಡಿಸಿಕೊಳ್ಳಬೇಕು. ಅಲ್ಲಿಂದ ತರಬೇಕು. ಆಮೇಲೆ ತಾಲ್ಲೂಕು ಪಂಚಾಯಿತಿ, ತಾಲ್ಲೂಕು ಟಿಎಪಿಸಿಎಂಎಸ್ ಯಾವುದ್ಯಾವುದು ಹೋಲ್‌ಸೇಲ್ ಏಜೆನ್ಸಿ ಇದೆ. ಅವರ ಮುಖಾಂತರ ಹಳ್ಳಿಗಳಲ್ಲಿ ಎಲ್ಲೆಲ್ಲಿ ನ್ಯಾಯಬೆಲೆ ಅಂಗಡಿಗಳಿವೆ, ಅಲ್ಲಿ ಹಂಚುವ ವ್ಯವಸ್ಥೆ ಅವರದು. ಅಲ್ಲಿಗೆ ಬಂದಮೇಲೆ ನಮ್ಮ ಇಲಾಖೆಯವರು ಅಕ್ಕಿ ಹಂಚುವುದು. ಮಕ್ಕಳಿಗೆ ಅಕ್ಕಿ ಕೊಡುವುದು ನಮ್ಮ ಇಲಾಖೆಗೆ ಸಂಬಂಧಪಟ್ಟಿರುವುದು. ಕೇಂದ್ರ ಸರ್ಕಾರದಿಂದ ಬರುವ ಸವಲತ್ತು ಏನಿದೆ, ಅದನ್ನೆಲ್ಲಾ ಉಪಯೋಗಿಸಿಕೊಂಡು ನಾವು ಯಾವುದೇ ರೀತಿ ಅನ್ಯಾಯವಾಗದ ಹಾಗೆ ಮಾಡುತ್ತಿದ್ದೇವೆ. ಆದರೆ ಶಾಲೆಗಳಲ್ಲಿಯೇ ಹಂಚುವ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎ. ನಾರಾಯಣಸ್ವಾಮಿ : ರೇಷನ್ ಕಾರ್ಡ್‌ಗೆ ಅಟ್ಯಾಚ್‌ಮೆಂಟ್ ಮಾಡಿಕೊಟ್ಟರೆ ಉಪಯೋಗವಾಗುತ್ತದೆ. ಆಗ ಮಕ್ಕಳ ತಂದೆತಾಯಿಗಳೇ ಅದನ್ನು ತೆಗೆದುಕೊಳ್ಳುತ್ತಾರೆ. ಆ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದು.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಉತ್ತರವನ್ನು ಈಗಾಗಲೇ ಹೇಳಿದ್ದೇನೆ.

(೫) ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಮಂಗನ ಖಾಯಿಲೆ ಕಾಣಿಸಿಕೊಂಡಿರುವುದು

ಶ್ರೀ ಎಸ್. ಅಂಗಾರ್ : ಮಾನ್ಯ ಅಧ್ಯಕ್ಷರೇ, ಸುಳ್ಯ ವಿಧಾನಸಭಾ ಕ್ಷೇತ್ರದ ಸುಳ್ಯ ತಾಲ್ಲೂಕಿನ ಬಳ್ಪ ಗ್ರಾಮದ ಬೀದಿಗುಡ್ಡೆ ಎಂಬಲ್ಲಿ ಮಂಗನ ಖಾಯಿಲೆ ಕಾಣಿಸಿದ್ದು ಗ್ರಾಮಸ್ಥರು ಜ್ವರಕ್ಕೆ ತುತ್ತಾಗಿ ಈಗಾಗಲೇ ಈ ಜ್ವರದಿಂದ ವಾಂತಿ, ತಲೆನೋವು ಶುರುವಾಗಿ ನಿಶಕ್ತಿ ಕಡಿಮೆಯಾಗಿ ಈಗಾಗಲೇ ಸುಬ್ರಹ್ಮಣ್ಯ ಗ್ರಾಮದ ಅರುಗುಡಿ ಎಂಬಲ್ಲಿ ವಾಸಿಸುತ್ತಿರುವ ಸೀತಮ್ಮ ಎಂಬುವರು ಮೃತಪಟ್ಟಿದ್ದಾರೆ. ಈ ಖಾಯಿಲೆ ಮಂಗನ ಖಾಯಿಲೆ ಎಂದು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಂದ ತಿಳಿದುಬಂದಿದೆ. ಸಂಬಂಧಪಟ್ಟ ಜಿಲ್ಲಾ ವೈದ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಒಂದು ವಾರ ಕಳೆದರೂ ಈ ಮಂಗನ ಖಾಯಿಲೆಯನ್ನು ತಡೆಗಟ್ಟುವಲ್ಲಿ ಸಂಬಂಧಪಟ್ಟ ಚುಚ್ಚುಮದ್ದು ಏನು ಇದೆ, ಅದನ್ನು ಈವರೆಗೆ ಯಾವುದೇ ಆಸ್ಪತ್ರೆಗೆ ಒದಗಿಸಿಲ್ಲ. ಈ ಗ್ರಾಮದಲ್ಲಿ ವಾಸಿಸುತ್ತಿರುವ ಜನಗಳು ಹೆಚ್ಚಾಗಿ ಕಡುಬಡುವರು ಹಾಗೂ ಮಧ್ಯಮ ವರ್ಗದ ಜನಗಳು. ಇವರು ಖಾಸಗಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆಯುವ ಪರಿಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ಸಂಬಂಧಪಟ್ಟ ರೋಗವನ್ನು ಅವಶ್ಯಕವಿರುವಂಥ ಚುಚ್ಚುಮದ್ದು ಹಾಗೂ ರೋಗವನ್ನು ಪತ್ತೆ ಮಾಡಬೇಕಾದರೆ ರಕ್ತ ಪರೀಕ್ಷೆಗಾಗಿ ಸಂಬಂಧಪಟ್ಟ ರಕ್ತವನ್ನು ಶಿವಮೊಗ್ಗಕ್ಕೆ ಕಳುಹಿಸಿ ಬರಲು ತುಂಬಾ ತಡವಾಗುವುದರಿಂದ ಸಂಬಂಧಪಟ್ಟ ಎಲ್ಲಾ ಔಷಧಿಗಳನ್ನು ತಕ್ಷಣ ಒದಗಿಸಬೇಕು. ಮತ್ತು ಜನರು ಭಯಭೀತರಾಗಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟ ಆರೋಗ್ಯ ಸಚಿವರು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಡಿ. ವಿ. ಸದಾನಂದಗೌಡ : ಎರಡು ಮಂಗಗಳು ಸತ್ತುಹೋಗಿರುವ ಬಗ್ಗೆ ವರದಿಗಳಾಗಿವೆ. ಹತ್ತು ದಿವಸದ ಹಿಂದೆ ಈ ಒಂದು ಖಾಯಿಲೆಯ ಬಗ್ಗೆ ಪ್ರಸ್ತಾಪ ಬಂದಿದ್ದರೂ ಕೂಡ ಡಿ.ಹೆಚ್.ಓ. ರವರಿಗೆ ಇದನ್ನು ಗಮನಕ್ಕೆ ತಂದರೂ ಕೂಡ ಇನ್ನು ಕೂಡ ಮದ್ದು ಸಪ್ಲೈ ಆಗಿಲ್ಲ ಎಂದರೆ ಹೇಗೆ? ಅದರ ಬಗ್ಗೆ ಸರ್ಕಾರ ಗಮನವನ್ನು ಹರಿಸಬೇಕು.

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಇವರು ದಿನಾಂಕ : 3-3-99 ರಂದು ದೂರವಾಣಿಯ ಮೂಲಕ ತಿಳಿಸಿ ಬೀದಿಗುಡ್ಡ (ಬಳ್ಪೆ) ಗ್ರಾಮಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಂಟುಂಬ ಕಲ್ಯಾಣಾಧಿಕಾರಿ ಮತ್ತು ಇತರೆ ವೈದ್ಯರು ಭೇಟಿಕೊಟ್ಟಿರುತ್ತಾರೆ. ಅಲ್ಲಿ ಒಂದು ಕೋತಿ ಸತ್ತಿರುವುದು ಕಂಡು ಬಂದಿರುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ಶವಪರೀಕ್ಷೆಯನ್ನು ಮಾಡಿ, ಕೋತಿಯ ಮೈ ಮೇಲಿನ ಉಣ್ಣೆಗಳನ್ನು ಪರೀಕ್ಷೆಗಾಗಿ ಕಳುಹಿಸಲಾಗಿದೆ. ಕೋತಿ ಸತ್ತ ಜಾಗದಲ್ಲಿ ಸುಮಾರು ಒಂದು ಎಕರೆ ಪ್ರದೇಶದಲ್ಲಿ ಪಾಲಿಡಾಲ್ ಕ್ರಿಮಿನಾಶಕವನ್ನು ಸಿಂಪಡಿಸಲಾಗಿದೆ. ಬೀದಿಗುಡ್ಡ ಗ್ರಾಮವು, ಪ್ರಾಥಮಿಕ ಆರೋಗ್ಯ ಕೇಂದ್ರ, ಸುಬ್ರಹ್ಮಣ್ಯ ವ್ಯಾಪ್ತಿಗೆ ಬರುತ್ತದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮತ್ತು ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಗ್ರಾಮದಲ್ಲಿ ಜ್ವರದ ಸರ್ವೆಮಾಡಿ 25 ಜನರ ರಕ್ತದ ಸ್ಯಾಂಪಲ್ ಪರೀಕ್ಷೆಗಾಗಿ ಮಂಗಳೂರು ಮತ್ತು ಶಿವಮೊಗ್ಗಕ್ಕೆ ಕಳುಹಿಸಿರುತ್ತಾರೆ. ಎಲ್ಲಾ ರೋಗಿಗಳಿಗೆ ಔಷಧೋಪಚಾರದ ವ್ಯವಸ್ಥೆಮಾಡಲಾಗಿದೆ. ರೋಗನಿಯಂತ್ರಣದ ಬಗ್ಗೆ ವಿಚಾರಿಸಲು ಸಿಬ್ಬಂದಿಯನ್ನು ಈ ಗ್ರಾಮದಲ್ಲಿ ಬಿಡಲಾಗಿದೆ. ಒಬ್ಬ ರೋಗಿ ಸುಮಾರು 60 ವರ್ಷಕ್ಕಿಂತ ಹೆಚ್ಚಾಗಿರುವ ವ್ಯಕ್ತಿ ಮೃತರಾಗಿರುವುದಾಗಿ ವರದಿಯಾಗಿದೆ. ಈ ಘಟನೆಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಬರುವುದಕ್ಕೆ ಮುಂಚೆಯೇ ನಡೆದಿರುತ್ತದೆ.

ಮೇಲಿನ ಎಲ್ಲಾ ವಿಷಯಗಳಲ್ಲಿ ರೋಗಿಗಳಿಗೆ ಪರಿಹಾರವನ್ನು ನೀಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ|| ಗುರುಸಿದ್ದಪ್ಪ ಇವರು ತಾವೇ ನಿಂತು ಕ್ರಮವನ್ನು ಜರುಗಿಸಿರುತ್ತಾರೆ. ರಕ್ತ ಪರೀಕ್ಷೆಯ ವರದಿ ಬಂದನಂತರ ಮಲೇರಿಯಾ ಅಥವಾ ಕೆ.ಎಫ್.ಡಿ. ಎಂದು ದೃಢಪಡಿಸಲಾಗುವುದು.

ಮಾನ್ಯ ಸದಾನಂದಗೌಡರು ಕೂಡ ಹೇಳಿದಂತೆ ಪಕ್ಕದ ಗ್ರಾಮದಲ್ಲಿಯೂ ಕೂಡ ಆಗಿದ್ದರೆ ಈ ಕೂಡಲೇ ಅವರಿಗೆ ಕಳುಹಿಸಿ ರಕ್ತದ ಸ್ಯಾಂಪಲ್‌ನ್ನು ಕಳುಹಿಸಿಕೊಡುವ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಆ) ಜಗನ್ನಾಥಶೆಟ್ಟಿ ಆಯೋಗದ ವರದಿ

ಶ್ರೀ ಶಿವಾನಂದ ನಾಯಕ್ : ಮಾನ್ಯ ಉಪಾಧ್ಯಕ್ಷರೇ, ನಾನು ಈ ವಿಷಯವನ್ನು ಪ್ರಸ್ತಾಪ ಮಾಡುವು ದಕ್ಕೆ ಹೋದಾಗ ಸಂಬಂಧಪಟ್ಟ ಸಚಿವರು ಇಲ್ಲ, ಇದನ್ನು ನಾಳೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಿರಿ. ಜಗನ್ನಾಥ್‌ಶೆಟ್ಟಿ ಆಯೋಗದ ವರದಿ ಬಗ್ಗೆ ಈಗಾಗಲೇ ಸದನದಲ್ಲಿ ಸಾಕಷ್ಟು ಪ್ರಸ್ತಾಪ ಮಾಡಿದ್ದೇನೆ. ಆದರೆ ಸರ್ಕಾರ ಒಂದು ರೀತಿಯ ಹಾರಿಕೆಯ ಉತ್ತರವನ್ನು ಕೊಡುತ್ತಾ ಬಂದಿದೆ. ಇದರ ಪರಿಣಾಮವಾಗಿ ಭಟ್ಕಳದಲ್ಲಿ ಏನಾಗಿದೆ 1993 ರ ಪರಿಸ್ಥಿತಿ ಮತ್ತೆ ಬರುವ ಸಂದರ್ಭ ಬಂದಿದೆ. ಇದನ್ನು ಏಕೆ ನಾನು ಹೇಳುವುದಕ್ಕೆ ಇಷ್ಟು ಪಡುತ್ತೇನೆ ಎಂದರೆ ಈಗಾಗಲೇ ಜಗನ್ನಾಥ್‌ಶೆಟ್ಟಿ